ದಿನಾಂಕ 07-04-2026 ರಂದು ಸಾಕ್ಷಿಯನ್ನು ಕರೆಯಿಸಿ ಮುಖ್ಯ ವಿಚಾರಣೆಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಅರ್ಜಿದಾರರ ಪರ ವಕೀಲರಿಂದಃಃ**

24. ತಾತ್ಕಾಲಿಕ ನಿರ್ಬಂಧ ಕಾಜ್ಞೆ ಆದೇಶ ಆದ ನಂತರ ನೀವು ಕಟ್ಟಿದ ಕಟ್ಟಡದ ಅಳತೆ ಎಷ್ಟು ಎಂದರೆ ಸಾಕ್ಷಿಯು ನಾನು ಅಳತೆ ಮಾಡಿಲ್ಲ ಎನ್ನುತ್ತಾರೆ. ನಿಮ್ಮ ಪತ್ರಗಳು 2ನೇ ಎದುರುದಾರನ ಹೆಸರಿನಲ್ಲಿ ಆದ ಪತ್ರಗಳು ನಾಮಮಾತ್ರ ಪತ್ರಗಳು ಎಂದರೆ ಸರಿ. ತಾತ್ಕಾಲಿಕ ನಿರ್ಬಂಧ ಕಾಜ್ಞೆ ಆದೇಶ ಆದ ನಂತರ ನೀವು ಕಟ್ಟಿದ ಕಟ್ಟಡದಲ್ಲಿ ಎಷ್ಟು ಪಿಲ್ಲರ್‌ಗಳಿವೆ ಎಂದರೆ ಸಾಕ್ಷಿಯು 12 ಎನ್ನುತ್ತಾರೆ. ನೀವು ಕಟ್ಟಿದ ಕಟ್ಟಡದ ಉತ್ತರ-ದಕ್ಷಿಣ 8 ಅಡಿ, ಪೂರ್ವ ಪಶ್ಚಿಮ ಇಪ್ಪತ್ತೊಂಬತ್ತುವರೆ ಅಡಿ ರಸ್ತೆಯ ಮೇಲೆ ಬರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸರಿಯಲ್ಲ ಎನ್ನುತ್ತಾರೆ. ಸದರಿ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳಲು ನ್ಯಾಯಾಲಯದಿಂದ ಕಮೀಷನರ್ ನೇಮಕ ಮಾಡಬಹುದೆ ಎಂದರೆ ಸಾಕ್ಷಿಯು ಈಗಾಗಲೇ ನೇಮಕ ಮಾಡಿರುತ್ತಾರೆ ಎನ್ನುತ್ತಾರೆ. ಈ ಪ್ರಕರಣದಲ್ಲಿ ಕಮೀಷನರ್ ನೇಮಕ ಮಾಡಲು ನನ್ನದು ಯಾವುದೇ ತಕರಾರು ಇಲ್ಲ.

25. ನೀವು ಕಟ್ಟಿದ ಕಟ್ಟಡದ ಪೂರ್ವ-ಪಶ್ಚಿಮ ಇಪ್ಪತ್ತೊಂಬತ್ತುವರೆ ಅಡಿ, ಉತ್ತರದಕ್ಷಿಣ ಇಪ್ಪತ್ತೊಂದು ಅಡಿ ಎಂದರೆ ಸರಿ.

26. ದಿ.27-08-2020 ಗುರುವಾರದಂದು ಅರ್ಜಿದಾರ & ಆತನ ಮಗ, ಪರಮೇಶಪ್ಪ, ಆದಪ್ಪರವರು ಬಂದು ನಿಮಗೆ ಈ ರೀತಿ ಕಟ್ಟಡ ಕಟ್ಟುವುದು ಸರಿಯಲ್ಲ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಅದೇ ರೀತಿಯಾಗಿ ನೀವು ಕಟ್ಟಡ ಕಟ್ಟಿದರೆ ಉತ್ತರಕ್ಕೆ ಇರುವವರಿಗೆ, ಹೋಗುವವರಿಗೆ, ಬರುವವರಿಗೆ ತೊಂದರೆಯಾಗುತ್ತದೆ ಎಂದು ಸದರಿಯವರು ಹೇಳಿದ್ದರು ಎಂದರೆ ಸರಿಯಲ್ಲ.

27. ನೀವು ಮಾಡಸಿರಿವಾರದಲ್ಲಿ ಆರ್ಥಿಕವಾಗಿ, ರಾಜಕೀಯವಾಗಿ ದುರ್ಬಲರಿದ್ದೀರಿ ಎಂದರೆ ಸಾಕ್ಷಿಯು ಹೇಳುವವರು ಹಾಗೆ ಹೇಳುತ್ತಾರೆ ಎನ್ನುತ್ತಾರೆ. ಮಾಡಸಿರಿವಾರದ ಪಿಡಿಓ ರವರು ಪರಮೇಶಪ್ಪ & ಆದಪ್ಪರವರಿಗೆ ಈ ರೀತಿ ಕಟ್ಟಡ ಕಟ್ಟುವುದು ಸರಿಯಲ್ಲ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಸದರಿಯವರ ಮೌಖಿಕ ಆದೇಶ ಪಾಲಿಸದೇ ಇದ್ದಿದ್ದರಿಂದ ಪಿಡಿಓ ರವರು ದಿ.29-8-2020 ರಂದು ಪರಮೇಶಪ್ಪ & ಆದಪ್ಪರವರಿಗೆ ಲಿಖಿತ ನೋಟೀಸು ಕೊಟ್ಟಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನಗೆ ಗೊತ್ತಿಲ್ಲ ಎನ್ನುತ್ತಾರೆ.

28. ಇದುವರೆಗೆ ನೀವು ಪಂಚಾಯಿತಿಯವರಿಂದ ಕಟ್ಟಡ ಪರವಾನಿಗೆ ಪಡೆದಿಲ್ಲ ಎಂದರೆ ಸರಿ. ಪಂಚಾಯಿತಿಯವರು ನಿಮ್ಮ ಅನಧೀಕೃತ ಕಟ್ಟಡವನ್ನು ನಿಲ್ಲಿಸಬಹುದಿತ್ತು ಎಂದರೆ ಸಾಕ್ಷಿಯು ಅದು ಅನಧೀಕೃತ ಅಲ್ಲ ಆದರೆ ನಿಲ್ಲಿಸಬಹುದಿತ್ತು ಎನ್ನುತ್ತಾರೆ. ನೀವು ಆ ರೀತಿ ಅನದೀಕೃತವಾಗಿ

ರಸ್ತೆಯ ಮೇಲೆ ಕಟ್ಟಡ ಕಟ್ಟಿರುವುದರಿಂದ ಹಲವಾರು ರೈತರಿಗೆ ತೊಂದರೆ ಆಗಿದೆ ಎಂದರೆ ಸಾಕ್ಷಿಯು ಆಗಿಲ್ಲ ಎನ್ನುತ್ತಾರೆ.

29. ನೀವು ನಿಮ್ಮ ಊರಿನಲ್ಲಿ ಆರ್ಥಿಕವಾಗಿ & ರಾಜಕೀಯವಾಗಿ ಬಲಾಢ್ಯರಿರುವುದರಿಂದ ರೈತರು ಅದನ್ನು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ನೀವು ಆರ್ಥಿಕವಾಗಿ & ರಾಜಕೀಯವಾಗಿ ಬಲಾಢ್ಯರಿರುವುದರಿಂದ ಅನದೀಕೃತವಾಗಿ ಕಟ್ಟಡ ಕಟ್ಟಿದ್ದೀರಿ ಎಂದರೆ ಸರಿಯಲ್ಲ. ನಿಮಗೆ ಜನವರಿ-20-2021 ರಂದು ಪಂಚಾಯಿತಿಯವರು ಕಾನೂನು ಬಾಹಿರವಾದ ಕಾರ್ಯವನ್ನು ನಿಲ್ಲಿಸಿ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಹಾಗಿದ್ದರೂ ಸಹ ನೀವು ಮೇಲ್ಛಾವಣಿ ಹಾಕಲು ಪ್ರಯತ್ನಿಸಿದ್ದೀರಿ ಎಂದರೆ ಸಾಕ್ಷಿಯು ನ್ಯಾಯಾಲಯ ಆದೇಶ ನೀಡಿತ್ತು ಆದ್ದರಿಂದ ಹಾಕಿಸಲು ಪ್ರಯತ್ನಿಸಿದ್ದೆವು ಎನ್ನುತ್ತಾರೆ. ದಿ.26-01-2021 ರಂದು ಗ್ರಾಮ ಪಂಚಾಯಿತಿ ರವರು ಗ್ರಾಮೀಣ ಠಾಣೆಯವರಿಗೆ ಅನದೀಕೃತ ಕಟ್ಟಡ ಕಟ್ಟುವುದನ್ನು ನಿಲ್ಲಿಸಿ ಎಂದು ದೂರು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯ ನಿಮಗೆ ಗೊತ್ತಿದ್ದರೂ ಸಹ ನೀವು ದಿ.26-01-2021 ರಂದು ಮೇಲ್ಛಾವಣಿ ಹಾಕಿಸಿದ್ದೀರಿ ಎಂದರೆ ಸರಿ.

30. ತಾತ್ಕಾಲಿಕ ನಿರ್ಬಂಧ ಕಾಜ್ಞೆಯ ಆದೇಶ ಜಾರಿಯಲ್ಲಿದ್ದರೂ ಸಹ ನೀವು ಕಟ್ಟಡ ಕಟ್ಟುವುದು, ಮೇಲ್ಛಾವಣಿ ಹಾಕಿಸುವುದು, ಓಪನಿಂಗ್ ಮಾಡುವುದು ಮಾಡಿದ್ದೀರಿ ಎಂದರೆ ಸಾಕ್ಷಿಯು ನ್ಯಾಯಾಲಯದ ಆದೇಶದ ಮೇರೆಗೆ ಮಾಡಿದ್ದೆವು ಎನ್ನುತ್ತಾರೆ.

31. ದಿ. 03-02-2020 ರಂದು ನೀವು ಕಟ್ಟಿದ ಕಟ್ಟಡಕ್ಕೆ ಮಾರುತಿ ನಿಲಯ ಎಂದು ಹೆಸರಿಟ್ಟು ಗೃಹಪ್ರವೇಶ ಮಾಡಿದ್ದೀರಿ ಎಂದು ನಿಪಿ-8 ನ್ನು ತೋರಿಸಿದ್ದು, ಸಾಕ್ಷಿಯು ಹೌದು ಮಾಡಿದ್ದೆ ಎನ್ನುತ್ತಾರೆ. ಸಾಕ್ಷಿಗೆ ಒಂದು ಫೋಟೋವನ್ನು ಮುಖಾಬಲೆ ಮಾಡಿದ್ದು, ಸಾಕ್ಷಿಯು ಅದರಲ್ಲಿರುವ ಅವರ ಮನೆಯನ್ನು ನೋಡಿ ಗುರುತಿಸಿದ್ದರಿಂದ, ಸದರಿ ಫೋಟೋದ ಭಾಗವನ್ನು **ನಿಪಿ-20** ಎಂದು ಗುರುತಿಸಲಾಯಿತು.

**<u>ಅರ್ಜಿದಾರರ ಪರ ವಕೀಲರು ಮುಂದುವರೆ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.</u>**
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು).**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**